# ಆಸ್ಟಿಯೋಕ್ಲಾಟೋಮಾ! ಹಾಗೆಂದರೇನು?

ನಟಿ ರಮ್ಯಾ ಆಸ್ಟಿಯೋಕ್ಲಾಟೋಮಾ ಎನ್ನುವ ಸಮಸ್ಯೆಯಿಂದ ಬಳಲುತ್ತಿದ್ದಾರೆ ಎನ್ನಲಾಗುತ್ತಿದೆ. ಸಾರ್ವಜನಿಕವಾಗಿ ಅವರು ಅಷ್ಟಾಗಿ ಕಾಣಿಸಿಕೊಳ್ಳುತ್ತಿಲ್ಲವಾದರೂ, ತೆರೆಮರೆಯಲ್ಲಿ ಉಳಿದು ಸಾಮಾಜಿಕ ಜಾಲತಾಣಗಳಲ್ಲಿ ಆಗಾಗ ಕಾಣಿಸಿಕೊಳ್ಳುತ್ತಿದ್ದಾರೆ. ಅಂದ ಹಾಗೆ, ಆಸ್ಟಿಯೋಕ್ಲಾಟೋಮಾ ಎಂದರೇನು?

■ ರಾಘವೇಂದ್ರ

ಸದಾ ಸುದ್ದಿಯಲ್ಲಿರುತ್ತಿದ್ದ ನಟಿ ರಮ್ಯಾ ಕೆಲವು ದಿನಗಳಿಂದ ಸದ್ದಿಲ್ಲದಂತೆ ದೆಹಲಿಯಲ್ಲಿ ತಂಗಿದ್ದಾರೆ. ನಟ ಅಂಬರೀಷ್ ಅವರ ನಿಧನದ ತರುವಾಯ ಆಕೆ ಮತ್ತೆ ಸುದ್ದಿಯಾಗುವ ಜೊತೆಗೆ, ತಮ್ಮ ಅಭಿಮಾನಿಗಳಲ್ಲಿ ಅನುಕಂಪದ ಭಾವವನ್ನು ಮೂಡಿಸಿದ್ದಾರೆ.

ಅಂಬರೀಷ್ ಅಂತಿಮ ದರ್ಶನಕ್ಕೆ ರಮ್ಯಾ ಬರಲಿಲ್ಲ ಎಂದು ಅಂಬಿ ಅಭಿಮಾನಿಗಳು ಸಿಟ್ಟಿಗೆದ್ದಿದ್ದರು. ಆಕೆ ರಾಜಕೀಯವಾಗಿ ಮಂಡ್ಯದಲ್ಲಿ ನೆಲೆಗೊಳ್ಳಲು ಅಂಬರೀಷ್ ಕಾರಣ. ಅವರು ರಾಜಕೀಯ ಪ್ರವೇಶಿಸಿದ ಸಂದರ್ಭದಲ್ಲಿ ಮಂಡ್ಯ ಲೋಕಸಭೆ ಉಪಚುನಾವಣೆಯನ್ನು ಎದುರಿಸಿ ಮೊದಲ ಬಾರಿಗೆ ಸಂಸದರಾಗಿದ್ದರು. ಅದಕ್ಕೆ ತಮ್ಮ ಗುರು ಅಂಬರೀಷ್ ಕಾರಣ. ಹೀಗಿದ್ದೂ ಅವರ ಸಾವಿನ ಸಂದರ್ಭದಲ್ಲಿ ಇಣುಕಿ ನೋಡದಷ್ಟು ರಮ್ಯಾ ಕೃತಘ್ನರಾದರು ಎನ್ನುವುದು ಅಂಬಿ ಅಭಿಮಾನಿಗಳ ಆಕ್ರೋಶಕ್ಕೆ ಕಾರಣವಾಗಿತ್ತು.

ಆದರೆ ಈಗ ರಮ್ಯಾ ವಿರುದ್ಧ ಅಂಬಿ ಅಭಿಮಾನಿಗಳಲ್ಲಿದ್ದ ಸಿಟ್ಟಿನ ಕಾರ್ಮೋಡ ಕರಗಿದೆ. ‘ಅಯ್ಯೋ ಪಾಪ, ಲವಲವಿಕೆಯಿಂದ ಓಡಾಡುತ್ತಿದ್ದ ರಮ್ಯಾಗೆ ಹೀಗಾಗಬಾರದಾಗಿತ್ತು’ ಎನ್ನುವ ಕೌತುಕದ ಕಾಳಜಿಯನ್ನು ಆಕೆಯನ್ನು ಬಲ್ಲವರು ತೋರಿಸುತ್ತಿದ್ದಾರೆ. ಈ ಸಹಾನುಭೂತಿಗೆ ಕಾರಣ, ಅವರನ್ನು ಕಾಡುತ್ತಿದೆ ಎನ್ನಲಾದ ಕ್ಯಾನ್ಸರ್. ಈ ಸುದ್ದಿ ಹರಿದಾಡಿದ ತಕ್ಷಣ ‘ಪಾಪ ರಮ್ಯಾ..’ ಎಂದು ಅಭಿಮಾನಿಗಳು ದೀರ್ಘ ಉಸಿರೆಳೆದು ಮರುಗುವಂತೆ ಮಾಡಿದೆ.

ಮೂಳೆ ಸಂಬಂಧಿ ಕ್ಯಾನ್ಸರ್‌ಗೆ ರಮ್ಯಾ ತುತ್ತಾಗಿದ್ದಾರೆ ಎನ್ನಲಾಗುತ್ತಿದೆ. ತೀವ್ರ ನೋವಿನ ಯಾತನೆಯನ್ನು ನೀಡುವ ಅದನ್ನು ಆಸ್ಟಿಯೋಕ್ಲಾಟೋಮಾ **(Osteoclastoma)** ಎಂದು ಗುರುತಿಸಿದ್ದಾರೆ. ಸಾಮಾನ್ಯವಾಗಿ ಮೂಳೆಯ ಗಂಟಿನ ಭಾಗದಲ್ಲಿ ಇದು ಕಾಣಿಸಿಕೊಳ್ಳುತ್ತದೆ.ಆಸ್ಟಿಯೋಕ್ಲಾಸ್ಟೋಮಾಗೆ ತುತ್ತಾದರೆ ಮೂಳೆಯಲ್ಲಿ ಸಹಿಸಲು ಅಸಾಧ್ಯ ಎನ್ನುವಷ್ಟು ನೋವು ಕಾಣಿಸಿಕೊಳ್ಳುತ್ತದೆ. ನಡೆದಾಡಲು ಪ್ರಾಣ ಹಿಂಡಿದಷ್ಟು ವೇದನೆಯಾಗುತ್ತದೆ. ಈ ಕಾಯಿಲೆಯಿಂದ ಪಾರಾಗಲು ಶಸ್ತ್ರಚಿಕಿತ್ಸೆಯನ್ನು ಬಿಟ್ಟರೆ ಅನ್ಯ ಮಾರ್ಗವೇ ಇಲ್ಲ ಎಂದು ವೈದ್ಯಲೋಕ ಹೇಳುತ್ತದೆ.

ವೈದ್ಯರು ಏನೆನ್ನುತ್ತಾರೆ?

'ಎಲುಬಿನ ಗಂಟಿನ ಭಾಗದಲ್ಲಿ ಮೂಳೆಯನ್ನು ನಾಶ ಮಾಡುವ ಕ್ಯಾನ್ಸರನ್ನು ಆಸ್ಟಿಯೋಕ್ಲಾಸ್ಟೋಮಾ ಎನ್ನುತ್ತಾರೆ. ಇದು ಮಾರಣಾಂತಿಕ ಕಾಯಿಲೆಯಲ್ಲ. ಚಿಕಿತ್ಸೆಯಿಂದ ಗುಣಪಡಿಸಬಹುದಾದ ರೋಗಗಳಲ್ಲಿ ಒಂದು. ರಾಜ್ಯದಲ್ಲಿಯೂ ಇದಕ್ಕೆ ಅನೇಕ ಕಡೆ ಚಿಕಿತ್ಸೆ ಲಭ್ಯವಿದೆ. ಶಸ್ತ್ರಚಿಕಿತ್ಸೆ ಮಾಡುವ ಸಂದರ್ಭದಲ್ಲಿ ರೋಗಕ್ಕೆ ಕಾರಣವಾಗಿರುವ ಜೀವಕೋಶಗಳನ್ನು ಸಂಪೂರ್ಣ ಹೊರತೆಗೆಯಬೇಕು. ನಾಶವಾದ ಮೂಳೆಯ ಭಾಗಕ್ಕೆ, ಸೊಂಟ



